**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 856/2018**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ** 04

**ದಿನಾಂಕಃ** 05.06.2026 **ಸಿಡಬ್ಲ್ಯೂ** 16

| | |
|---|---|
| ಹೆಸರು | ಮಂಜುನಾಥ |
| ತಂದೆ ಹೆಸರು | ರುದ್ರಪ್ಪ |
| ವಯಸ್ಸು | 41 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಹನಗವಾಡಿ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ಅಪಘಾತವನ್ನು ನೋಡಿರುವುದಿಲ್ಲ ಅಪಘಾತವಾದ ನಂತರ ಸ್ಥಳಕ್ಕೆ ಹೋಗಿರುತ್ತೇನೆ. ನಂತರ ಪೊಲೀಸರು ಬಂದಿರುತ್ತಾರೆ. ಅವರ ಜೊತೆ ಸೇರಿ ಮೃತ ದೇಹವನ್ನು ಆಸ್ಪತ್ರೆಗೆ ಕಳುಹಿಸಿ ಕೊಟ್ಟಿರುತ್ತೇವೆ. ಅದನ್ನು ಬಿಟ್ಟು ನನಗೆ ಬೇರೆ ವಿಷಯ ಗೊತ್ತಿರುವುದಿಲ್ಲ. ಅಪಘಾತವು ಲಾರಿ ಮತ್ತು ಕಾರಿನ ಮಧ್ಯೆ ಆಗಿರುತ್ತದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಎಪಿಪಿ ಯವರು ಕೋರಿದ್ದು, ಸಂಗತಿಗಳನ್ನು ಪರಿಶೀಲಿಸಲಾಗಿ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲುಃ ಸಸಅ ರವರಿಂದಃ**

ನಾನು ಪೂನಾ ಬೆಂಗಳೂರು ಹೈವೇ ಪಕ್ಕದಲ್ಲಿ ನನ್ನ ಪಾನ್ ಶಾಪ್ ಇಟ್ಟುಕೊಂಡಿರುತ್ತೇನೆ ಎಂದರೆ ಸರಿ. ದಿಃ 24.05.2018 ರಂದು ಬೆಳಗಿನ ಜಾವ 2.30 ರಿಂದ 3.00 ಗಂಟೆಗೆ ನಾನು ಟೀ ಕುಡಿಯಲೆಂದು ರಾಯಲ್ ಗಾರ್ಡನ ಡಾಬಾಗೆ ಬಂದಿದ್ದೆನು ಎಂದರೆ ಸರಿ. ಅದೇ ಸಮಯಕ್ಕೆ ಬೆಂಗಳೂರು ಕಡೆಯಿಂದ ಒಬ್ಬ ಲಾರಿ ಚಾಲಕ ಲಾರಿಯನ್ನು ಚಾಲನೆ ಮಾಡಿಕೊಂಡು ಬಂದು ನಮ್ಮ ಡಾಬಾದ ಮುಂಬಾಗ ರಸ್ತೆಯಲ್ಲಿ ನಿಲ್ಲಿಸಿ ಡಾಬಾಕ್ಕೆ ಟೀ ಕುಡಿಯಲು ಬಂದಿರುತ್ತಾನೆ ಎಂದರೆ ಸರಿ. ಆ ಸಮಯದಲ್ಲಿ ಡಾಬಾ ಮಾಲಿಕ ಬಾಬುಸಾಬ್ ಕೆಲಸಗಾರ ಅರ್ಜುನ್ ನಾಯ್ಕ ಲಾರಿಯನ್ನು ರಸ್ತೆಯಲ್ಲಿಯೇ ನಿಲ್ಲಿಸಿದ್ದೀಯಾ ಸೈಡಿಗೆ ನಿಲ್ಲಿಸಿ ಬಾ ಎಂದು ಹೇಳಿರುತ್ತಾನೆ ಎಂದರೆ ಸರಿ. ಆಗ ಲಾರಿ ಚಾಲಕ ಬೇಗ ಹೋಗುತ್ತೇನೆ ಎಂದು ಹೇಳಿ ಡಾಬಾದ ಒಳಗೆ ಬರುತ್ತಿದ್ದಂತೆ ಬೆಂಗಳೂರು ಕಡೆಯಿಂದ

ಬಂದ ಒಂದು ಕಾರು ಲಾರಿಯ ಹಿಂಬಾಗಕ್ಕೆ ಡಿಕ್ಕಿಯಾಗಿ ಅಪಘಾತವಾಯಿತು ಎಂದರೆ ಸರಿ. ಕೂಡಲೇ ನಾನು ಅರ್ಜುನ್ ನಾಯ್ಕು, ಬಾಬು ಸಾಬ್ ಹಾಗೂ ಲಾರಿ ಚಾಲಕ ಹೋಗಿ ನೋಡಲಾಗಿ ಕಾರು ಲಾರಿಯ ಹಿಂಬಾಗ ಬಲಬಾಗದಲ್ಲಿ ಸಿಕ್ಕಿಹಾಕಿಕೊಂಡು ಕಾರು ಚಾಲಕ ಮತ್ತು ಆತನ ಪಕ್ಕದಲ್ಲಿ ಕುಳಿತಿದ್ದ ಒಂದು ಹೆಂಗಸು ಚೀರಾಡುತ್ತಿದ್ದರು ಎಂದರೆ ಸರಿ. ಕಾರಿನ ಹಿಂಬದಿ ಸೀಟಿನಲ್ಲಿ ಕುಳಿತಿದ್ದ ಒಂದು ಹೆಂಗಸು ಒಬ್ಬ ಗಂಡಸಿಗೆ ತೀವ್ರ ಗಾಯಗಳಾಗಿ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿ. ನಾವು ಗಾಯಗೊಂಡಿದ್ದವರನ್ನು ಕಾರಿನಿಂದ ಹೊರಡೆ ಎಳೆದುಕೊಳ್ಳಲು ಪ್ರಯತ್ನಿಸುತ್ತಿದ್ದಾಗ ಹೈ ಪೆಟ್ರೋಲಿಯಂಲ್ಲಿದ್ದ ಹರಿಹರ ಗ್ರಾಮಾಂತರ ಠಾಣಾ ಪೊಲೀಸರಾದ ರಾಮಪ್ಪ ಮತ್ತು ಮಹೇಶ ಕುಮಾರ ಸ್ಥಳಕ್ಕೆ ಬಂದಿರುತ್ತಾರೆ ಎಂದರೆ ಸಾಕ್ಷಿಯು ಪೊಲೀಸರು ಬಂದಿದ್ದರು ಅವರ ಹೆಸರು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಂತರ ನಾವು ಮತ್ತು ಪೊಲೀಸರು ಕಾರಿನಲ್ಲಿದ್ದವರನ್ನು ಹೊರಗಡೆ ಎಳೆದುಕೊಂಡು ನೋಡಲಾಗಿ ಕಾರ ಚಾಲಕನಿಗೆ ಎಡಕಣ್ಣು, ಎಡಭುಜ ಕೈಕಾಲುಗಳಿಗೆ ಮತ್ತು ಕಾರು ಚಾಲಕನ ಪಕ್ಕ ಕುಳಿತಿದ್ದ ಹೆಂಗಸಿಗೆ ಎಡತಲೆ, ಎಡಬುಜ ಕೈಕಾಲುಗಳಿಗೆ ರಕ್ತ ಗಾಯಗಳಾಗಿದ್ದವು ಎಂದರೆ ಸರಿ. ನಂತರ ಸ್ಥಳಕ್ಕೆ ಬಂದ ಆಂಬುಲೆನ್ಸನಲ್ಲಿ ಗಾಯಗೊಂಡವನ್ನು ದಾವಣಗೆರೆ ಎಸ್ ಎಸ್ ಆಸ್ಪತ್ರೆಗೆ ಮತ್ತು ಬೇರೆ ವಾಹನದಲ್ಲಿ ಶವಗಳನ್ನು ಹರಿಹರ ಆಸ್ಪತ್ರೆಗೆ ಶವಾಗಾರಕ್ಕೆ ಕಳುಹಿಸಿಕೊಟ್ಟೆವು ಎಂದರೆ ಸರಿ. ನಂತರ ಅಪಘಾತಕ್ಕೀಡಾದ ಕಾರ ನಂ. ನೋಡಲಾಗಿ ಕೆಎ 3 ಎಂ ಟಿ 4765 ಹ್ಯುಂಡೆ ಕಂಪನಿಯ ಐ20 ಕಾರು ಆಗಿದ್ದು ಲಾರಿ ಸಂಖೆ ಕೆಎ 07 ಎ9239 ಇತ್ತು ಎಂದರೆ ಸರಿ. ನಂತರ ಗಾಯಗೊಂಡಿದ್ದವರು ಕಾರ ಚಾಲಕ ರಾಮಕೃಷ್ಣ ಆತನ ಹೆಂಡತಿ ಸುನಿತಾ ಮೃತ ಪಟ್ಟವರು ಚಂದ್ರಶೇಖರ ಮತ್ತು ಸಂತೋಷ ಆಗಿದ್ದು ಎಲ್ಲರೂ ಸಂಗೀತ ಕಾರ್ಯಕ್ರಮಕ್ಕೆಂದು ಬೆಂಗಳೂರಿನಿಂದ ಬೈಲಹೊಂಗಲಕ್ಕೆ ಹೋಗುತ್ತಿದ್ದರು ಎಂದು ಗೊತ್ತಾಯಿತು ಎಂದರೆ ಸರಿ. ನಂತರ ಪೊಲೀಸರು ಹರಿಹರ ಗ್ರಾಮಾಂತರ ಠಾಣೆಗೆ ಕರೆಸಿದ್ದು ಅಲ್ಲಿ ಲಾರಿ ಚಾಲಕ ಹಾಜರಿದ್ದು ಅವನನ್ನು ನೋಡಿ ನಾನು ಗುರುತಿಸಿರುತ್ತೇನೆ ಎಂದರೆ ಸರಿ. ಲಾರಿ ಚಾಲಕನ ಹೆಸರು ಕುರಂ ಪಾಷಾ ಬಿನ್ ನಿಸಾರ್ ಅಹಮದ್ ವಾಸ ಕೋಲಾರ ಎಂದು ಗೊತ್ತಾಯಿತು ಎಂದರೆ ಸರಿ. ಸದರಿ ಅಪಘಾತ ಆರೋಪಿ ಕುರಂ ಪಾಶಾನ ಯಾವುದೇ ಪಾರ್ಕಿಂಗ ಸೂಚನೆ ಮತ್ತು ಲಾರಿ ಇಂಡಿಕೇಟರ್ ಹಾಕದೇ ವಾಹನ ಸಂಚಾರಕ್ಕೆ ಅಡಚಣೆಯಗುವಂತೆ ಲಾರಿಯನ್ನು ರಸ್ತೆಯಲ್ಲಿ ನಿಲ್ಲಿಸಿ ನಿರ್ಲಕ್ಷ್ಯ ವಹಿಸಿದ್ದರಿಂದ ಅಪಘಾತವಾಗಿರುತ್ತದೆ ಎಂದರೆ ಸರಿ. ಈ ರೀತಿ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ಸಾಕ್ಷಿಯು ನ್ಯಾಯಾಲಯಲ್ಲಿರುವ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ ಕೆ ಡಿ ವಕೀಲರಿಂದಃ**

ನನ್ನ ಸ್ವಂತ ಊರು ಹನಗವಾಡಿ ಗ್ರಾಮ ಎಂದರೆ ಸರಿ. ನಮ್ಮ ಊರಿನಿಂದ ಅಪಘಾತ ಸ್ಥಳ 1 ವರೆಯಿಂದ 2 ಕಿ ಮೀ ಇರುತ್ತದೆ. ನಾನು ಆರೋಪಿತರನ್ನು ಇಂದೇ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿ. ನಾನು ಅಪಘಾತವಾದ ಅರ್ಧ ಗಂಟೆಯಲ್ಲಿ ಅಪಘಾತ ಸ್ಥಳಕ್ಕೆ

ಹೋಗಿರುತ್ತೇನೆ. ಪೊಲೀಸರು ನನ್ನ ಹೇಳಿಕೆ ಪಡೆದು ನನ್ನ ಸಹಿ ತೆಗೆದುಕೊಂಡಿರುತ್ತಾರೆ. ಅಪಘಾತವಾದ ಅದೇ ದಿನ ನಾನು ಪೊಲೀಸ್ ಠಾಣೆಗೆ ಹೋಗಿ ಸಹಿ ಮಾಡಿರುತ್ತೇನೆ. ನಾನು ಅಪಘಾತವನ್ನು ನೋಡಿರುವುದಿಲ್ಲ. ಅಪಘಾತ ಯಾರ ತಪ್ಪಿನಿಂದ ಮತ್ತು ಹೇಗೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಆರೋಪಿತನು ಎಲ್ಲಿ ವಾಹನ ನಿಲ್ಲಿಸಿದ್ದನು ಹಾಗೂ ಹೇಗೆ ನಿಲ್ಲಿಸಿದ್ದನು ಎಂದು ನಾನು ನೋಡಿಲ್ಲ. ನಾನು ಚಾಸಾ.1 ರವರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ